೧೯೮೭ನೇ ಇಸವಿ ಕರ್ನಾಟಕ ಮನರಂಜನಾ ತೆರಿಗೆ ತಿದ್ದುಪಡಿ ವಿಧೇಯಕ

''ಪರ್ಯಾಲೋಚನಾ ಪ್ರಸ್ತಾವ''

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ''೧೯೮೭ನೇ ಇಸವಿ ಕರ್ನಾಟಕ ಮನರಂಜನಾ ತೆರಿಗೆ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮನವಿ ಮಾಡುತ್ತೇನೆ.''

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಇದು ಬಹಳ ಸರಳವಾದಂತಹ ಒಂದು ತಿದ್ದುಪಡಿ ಮಸೂದೆ. ಹಿಂದೆ ಸಿನಿಮಟೋಗ್ರಾಫಿಕ್ ಷೋ ಅನ್ನು ಕೊಡಗು, ಕೊಂಕಣಿ, ತುಳು ಭಾಷೆಯ ಚಿತ್ರಗಳನ್ನು ಕರ್ನಾಟಕ ರಾಜ್ಯದಿಂದ ಹೊರಗಡೆ ತಯಾರು ಮಾಡಿದಾಗ ಅದರಮೇಲೆ ಮನರಂಜನಾ ತೆರಿಗೆಯನ್ನು ಅರ್ಧದಷ್ಟನ್ನು ಕೊಡಬೇಕೆಂದು ಇತ್ತು. ಅದನ್ನು ೧೯೮೬ನೇ ಡಿಸೆಂಬರ್‌ರವರೆಗೆ ಕೊಟ್ಟಿತ್ತು. ಆದರೆ ಈ ಮಧ್ಯೆ ಇದಕ್ಕೆ ಸಂಬಧ ಪಟ್ಟನಿರ್ಮಾಪಕರು ಹಾಗೂ ಇತರರು ಈ ಸೌಲಭ್ಯವನ್ನು ಇನ್ನೂ ಸ್ವಲ್ಪ ದಿನ ಮುಂದುವರಿಸಬೇಕೆಂದು ಕೇಳಿದ್ದಾರೆ ಅವರ ಮನವಿಯ ಮೇರೆಗೆ ಅಧ್ಯಾದೇಶದ ಮುಖಾಂತರ ಈಗಾಗಲೇ ಈ ಅನುಕೂಲವನ್ನು ಡಿಸೆಂಬರ್ ೮೭ರ ವರೆಗೆ ಕೊಟ್ಟಾಗಿದೆ. ಅದನ್ನು ಕಾನೂನು ಮಾಡುವುದಕ್ಕೆ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ ಇದಕ್ಕೆ ಒಪ್ಪಿಗೆ ಕೊಡ ಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು,''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೩ರವರೆಗೆ

ಅಧ್ಯಕ್ಷರು.—''ಖಂಡ ೨ರಿಂದ ೩ನೇ ಖಂಡವು ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೩ ಎರಡೂ ಒಳಗೊಂಡುತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಥಮ ಖಂಡ ಇತ್ಯಾದಿ

ಅಧ್ಯಕ್ಷರು.—''ಪ್ರಥಮ ಖಂಡ ಮತ್ತು ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗ ವಾಗಿರಬೇಕು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಪ್ರಸ್ತಾಪದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ ''೧೯೮೭ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆಗಳು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಪಾಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ನೇ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕ ಪರ್ಯಾಲೋಚನೆ ಪ್ರಸ್ತಾವ

ಅಧ್ಯಕ್ಷರು.—ಜಾಲಪ್ಪನವರೇ ತಾವು ಮಂಡಿಸಿ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—''ಮಾನ್ಯ ಅಧ್ಯಕ್ಷರೇ, ೧೯೮೭ನೇ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.''

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೆ, ಇದನ್ನು ಈಗಾಗಲೇ ಆರ್ಡಿನೆನ್ಸ್ ಮೇಲೆ ತಂದಿದ್ದೇನೆ. ಬಹಳ ಮುಖ್ಯವಾಗಿ ಎರಡು ಕಲಂಗಳನ್ನು ಇದರಲ್ಲಿ ನಾವು ಬದಲಾಯಿಸಿದ್ದೇವೆ. ಇದರಲ್ಲಿ ಈಗ ಹಿಂದಿನಿಂದಲೂ ಈ ಲೇವಾದೇವಿಗಾರರು ಮಾಡುತ್ತಿದ್ದ ಮತ್ತು ಸರ್ಕಾರದ ಸಂಸ್ಥೆಗಳು, ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗಳು ಬೇರೆ ಬೇರೆ ಸಂಸ್ಥೆಗಳಿಗೆ ಇದರಿಂದ ವಿನಾಯಿತಿ ಕೊಡಬೇಕಾದರೆ ಆಕ್ಟ್ ಅಮೆಂಡ್‌ಮೆಂಟ್ ಮಾಡಬೇಕಿತ್ತು. ಆದರಿಂದ ಬೇರೆ ಇಂಥ ಸಂಸ್ಥೆಗಳಿಗೆ ವಿನಾಯಿತಿ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇರಬೇಕು. ಅದನ್ನು ನಾವು ಈ ಆಕ್ಟಿನಲ್ಲಿ ತಂದಿದ್ದೇವೆ. ಎರಡನೆಯದಾಗಿ ಈ ಕಲಂ ೨೦ ಮತ್ತು ೨೧ ಇದರ ಪ್ರಕಾರ ಲೇವಾದೇವಿಗಾರರಿಗೆ ಹಿಂದಿ, ಗುಜರಾತಿ, ಮರಾಠಿ ಭಾಷೆಯಲ್ಲಿ ತಮ್ಮ ಲೆಕ್ಕಗಳನ್ನು ಇಡುತ್ತಿದ್ದರು. ಇದರಿಂದ ಲೇವಾದೇವಿಗಾರರಿಗೆ ಅವರಿಗೆ ಭಾಷೆಯ ಜ್ಞಾನವಿಲ್ಲದೆ ಗೊತ್ತಾಗುತ್ತಿರಲಿಲ್ಲ. ಇನ್ನು ಮೇಲೆ ಇದಕ್ಕೆ ಬದಲಾಗಿ ಅವರು ಕನ್ನಡ ಅಥವಾ ಇಂಗ್ಲೀಷ್ ಎರಡರಲ್ಲಿಯೇ ಲೆಕ್ಕಗಳನ್ನು ಬರೆಯಬೇಕು ಎಂದು ನಾವು ಒಂದನ್ನು ಸೂಚಿಸಿದ್ದೇವೆ. ದಯವಿಟ್ಟು ಸಭೆಯು ಇದನ್ನು ಅನುಮೋದಿಸಬೇಕೆಂದು ಪ್ರಾರ್ಥನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೭ರ ಕರ್ನಾಟಕ ಲೇವಾದೇವಿಗಾರರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೫ ರವರೆಗೆ

ಅಧ್ಯಕ್ಷರು.—''ಖಂಡ ೨ ರಿಂದ ೫ ರವರೆಗೆ ಎಲ್ಲೂ ತಿದ್ದುಪಡಿ ಇರುವಂತೆ ಈ ವಿಧೇಯಕವು ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ ರವರೆಗೆ ಎಲ್ಲೂ ತಿದ್ದುಪಡಿ ಇರುವಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪೀಠಿಕೆ ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.''

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ವಿಧೇಯಕವನ್ನು ಅನುಸೂಚಿಸುವ ಸೂತ್ರ ಸಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ